## ಮೊದಲೆಲ್ಲ ಹೀಗಿರಲಿಲ್ಲ



ಇಪ್ಪತ್ತಾರು ವರ್ಷದಿಂದ ಶಿಕ್ಷಕಿಯಾಗಿದ್ದೇನೆ. ಶಾಲೆಗೆ ಸೇರಿದ ಆರಂಭದ ದಿನಗಳು ಹೀಗಿರಲಿಲ್ಲ. ಶಾಲೆ ಮತ್ತು ಮನೆ – ಇಷ್ಟೇ ನಮ್ಮ ಪ್ರಪಂಚವಾಗಿತ್ತು. ಈಗ ಕಾಲ ಬದಲಾಗಿದೆ. ನಮ್ಮನ್ನೂ ಬದಲಾಯಿಸುತ್ತಿದೆ. ಆಗ ಬೆಳಿಗ್ಗೆ 10ಕ್ಕೆ ತರಗತಿಗೆ ಬಂದರೆ ಸಂಜೆವರೆಗೂ ಶಾಲೆಯಲ್ಲೇ ವಿದ್ಯಾರ್ಥಿಗಳೊಂದಿಗೆ ಕ್ರಿಯಾಶೀಲವಾಗಿರುತ್ತಿದ್ದೆವು. ಮಕ್ಕಳ ಮತ್ತು ಶಿಕ್ಷಕರ ನಡುವೆ ಉತ್ತಮ ಬಾಂಧವ್ಯವೂ ಇತ್ತು. ಆ ಬಾಂಧವ್ಯ ಏರ್ಪಡಲು ಸೂಕ್ತ ವಾತಾವರಣವೂ ಇತ್ತು.

ಈಗ ಆ ದಾಖಲೆ, ಈ ದಾಖಲೆ, ತರಬೇತಿ, ಕಾರ್ಯಾಗಾರ, ಹೀಗೆ ಬಹು ವಿಧದ ಕಾರ್ಯಗಳು ಶಿಕ್ಷಕಿಯರ ಮೈಗಂಟಿವೆ. ಎಲ್ಲವೂ ಆನ್‌ಲೈನ್‌ನಲ್ಲೇ ಮಾಹಿತಿಯನ್ನೂ ದಾಖಲಿಸಬೇಕು. ನಿವೃತ್ತಿಗೆ ಮೂರು ವರ್ಷ ಬಾಕಿ ಇರುವ ನನ್ನಂಥವರಿಗೆ ಆ ಬಗ್ಗೆ ತರಬೇತಿಯೂ ನೀಡಿಲ್ಲ. ಕಷ್ಟಪಟ್ಟು ಡಿಟಿಪಿ ಸೆಂಟರ್‌ನಲ್ಲೋ ಅಥವಾ ಯುವ ಶಿಕ್ಷಕಿಯರಿಂದಲೋ ಮಾಹಿತಿ ದಾಖಲಿಸಬೇಕಾಗಿದೆ. ಮಕ್ಕಳು–ಶಿಕ್ಷಕ ವರ್ಗವನ್ನು ಅವರ ಪಾಡಿಗೆ ಬಿಟ್ಟುಬಿಟ್ಟರೆ ಉತ್ತಮ ಫಲಿತಾಂಶ ಬಂದೇ ಬರುತ್ತದೆ. ಆದರೆ, ನೂರೆಂಟು ಜವಾಬ್ದಾರಿಗಳ ನಡುವೆ ಬೋಧನೆ ಕಾರ್ಯ ಹೊರೆಯೇ ಸರಿ. ಆದರೂ, ಎಲ್ಲರೂ ಇಲಾಖೆ ನಿಯೋಜಿಸುವ ಕಾರ್ಯಗಳನ್ನು ಚಾಚೂ ತಪ್ಪದೆ ಮಾಡುತ್ತಿದ್ದೇವೆ.

**–ವಿ.ಎನ್‌. ಕೀರ್ತಿವತಿ**

ಶಿಕ್ಷಕಿ, ಬಿಐಇಆರ್‌ಟಿ (ಬ್ಲಾಕ್ ಇನ್‌ಕ್ಲೂಸಿವ್ ಎಜುಕೇಶನ್ ರಿಸರ್ಚ್ ಟೀಚರ್), ಧಾರವಾಡ

ಕುರಿತೂ ಅವರು ಗಮನ ಸೆಳೆಯುತ್ತಾರೆ. ‘ಗಣತಿಕಾರ್ಯ ಶಿಕ್ಷಕಿಯರಿಗೆ ದೊಡ್ಡ ಸವಾಲು. ಆರೋಗ್ಯ ಸಮಸ್ಯೆ, ಕೌಟುಂಬಿಕ ಸಮಸ್ಯೆ ಇದ್ದರೂ ಇದರಿಂದ ಮುಕ್ತಿ ಇಲ್ಲ. ಇನ್ನು ಮನೆ ಮನೆ ಭೇಟಿಗೆ ಹೋದರೆ ನಗರಗಳಲ್ಲಿ ದೊಡ್ಡ ದೊಡ್ಡ ಅಪಾರ್ಟ್‌ಮೆಂಟ್‌ಗಳು. ಅವುಗಳ ಒಳಗೆ ಹೋಗಲು ಭಯವಾಗುತ್ತದೆ. ಒಳಹೊಕ್ಕರೆ ಮನೆಗಳಿಗೆ ಬೀಗ. ಅವರು ಮನೆಯಲ್ಲಿರುವ ಸಮಯ ನೋಡಿಕೊಂಡು ಮಾಹಿತಿ ಪಡೆಯಲು ಅಲೆಯಬೇಕು. ಗ್ರಾಮೀಣ ಭಾಗದಲ್ಲಿ ಜನರ ಬಳಿ ಮಾಹಿತಿ ಕೇಳಲು ಹೋದರೆ ಅವರ ನೂರೆಂಟು ಪ್ರಶ್ನೆಗಳಿಗೆ ನಾವೇ ಉತ್ತರಿಸಬೇಕು. ಈ ಕೆಲಸದಲ್ಲಿ ಕುಡುಕರು, ವೃದ್ಧರು, ಅನಕ್ಷರಸ್ಥರು, ಸಭ್ಯತೆ ಮರೆತ ಕಾಮಣ್ಣರು ಹೀಗೆ ಎಲ್ಲರ ಜೊತೆಗೂ ಮಾತನಾಡಬೇಕಾಗುತ್ತದೆ. ಎಷ್ಟೋ ಸಲ ಇದು ನರಕದರ್ಶನ ಮಾಡಿಸಿಬಿಡುತ್ತದೆ’ ಎನ್ನುವಾಗ ಕೆಟ್ಟ ಅನುಭವಗಳ ನೆನಪಿನಲ್ಲಿ ಸವಿತಾ ಅವರ ಧ್ವನಿ ಕಂಪಿಸುತ್ತಿತ್ತು.

‘ಚುನಾವಣಾ ಕಾರ್ಯಕ್ಕೆ ನಮ್ಮನ್ನು ನಿಯೋಜಿಸುತ್ತಾರೆ. ಆದರೆ, ಕನಿಷ್ಠಮಟ್ಟದ ಸೌಲಭ್ಯಗಳೂ ಇರುವುದಿಲ್ಲ. ಎಷ್ಟೋ ಬಾರಿ ಎರಡು ದಿನ ಸ್ನಾನ ಇಲ್ಲದೆ ಹಾಗೇ ಕರ್ತವ್ಯ ನಿರ್ವಹಿಸಿದ್ದೇವೆ. ಇನ್ನು ಚುನಾವಣೆ ಮುಗಿದ ಬಳಿಕ ಬೂತ್‌ಗಳನ್ನು ಮಸ್ಟರಿಂಗ್ ಕೇಂದ್ರಕ್ಕೆ ವರ್ಗಾಯಿಸಿದರೆ ಮುಗಿಯಿತು. ಚುನಾವಣಾ ಇಲಾಖೆಗೂ ನಮಗೂ ಸಂಬಂಧವೇ ಇರುವುದಿಲ್ಲ. ಆ ಕಾರ್ಯ ಮುಗಿಯುವಷ್ಟರಲ್ಲಿ ರಾತ್ರಿ 11 ಆಗಿರುತ್ತದೆ. ಆನಂತರ ಆಕೆ ಉಳಿದುಕೊಳ್ಳಲು ಯಾವ ವ್ಯವಸ್ಥೆಯೂ ಇರುವುದಿಲ್ಲ. ನಡುರಾತ್ರಿಯಲ್ಲೇ ಆಕೆ ಊರಿನತ್ತ ಪಯಣ ಬೆಳೆಸಬೇಕು. ಅದೂ ಬಸ್ ವ್ಯವಸ್ಥೆ ಇದ್ದರೆ, ಇಲ್ಲದಿದ್ದರೆ ಇಲ್ಲ’ ಎಂದು ಬೇರೆ ಇಲಾಖೆಗಳ ಕೆಲಸ ನಿರ್ವಹಿಸುವಾಗ ಎದುರಾಗುವ ಅವ್ಯವಸ್ಥೆಯನ್ನು ವಿವರಿಸುತ್ತಾರೆ ಲೇಖಕಿಯೂ ಆಗಿರುವ ಕಾರವಾರದ ಚಿತ್ತಕುಲದ ಸೀಬರ್ಡ್ ನಿರಾಶ್ರಿತರ ಪ್ರೌಢಶಾಲೆಯ ಶಿಕ್ಷಕಿ ಶ್ರೀದೇವಿ ಕೆರೆಮನೆ.


